ತೆಗೆದುಕೊಳ್ಳಲಾಗುವುದು.

ಇಲ್ಲ, ಈ ಕೆಲಸವನ್ನು ಖಾಸಗಿಯವರಿಗೆ ವಹಿಸುವ ಬಗ್ಗೆ ಸರ್ಕಾರವು ಆಲೋಚಿಸಿಲ್ಲ.

ವಿಷಯ:- ಕುಮಟಾ- ಅಂಕೋಲಾ ಮಧ್ಯೆ ವಿದ್ಯುತ್ ಲೈನ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 106(396)

ಶ್ರೀ ವಿಶ್ವೇಶ್ವರ ಹೆಗ್ಗಡೆ(ಅಂಕೋಲ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಕುಮಟಾ-ಅಂಕೋಲಾ ಮಧ್ಯೆ ವಿದ್ಯುತ್ ಲೈನ್ ಯಾವ ವರ್ಷದಲ್ಲಿ ಹಾಕಲಾಗಿದೆ. ಅದರಲ್ಲಿ ವಿದ್ಯುತ್ ಸರಾಗವಾಗಿ ಸಾಗುತ್ತಿದೆಯೇ?

ಆ) ಅಂಕೋಲಾ ನಗರಕ್ಕೆ ಕಾರವಾರದಿಂದ ವಿದ್ಯುತ್ ಪೂರೈಕೆ ಸಮರ್ಪಕವಾಗಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ

(ಇಂಧನ ರಾಜ್ಯ ಸಚಿವರು):-

(ಅ) ಕುಮಟಾ- ಅಂಕೋಲಾ 33 ಕೆ.ವಿ. ವಿದ್ಯುತ್ ಲೈನು 1961ರಿಂದ ಕಾರ್ಯ ನಿರ್ವಹಿಸುತ್ತಿದೆ. ಕೆಲವೊಮ್ಮೆ ಈ ವಿದ್ಯುತ್ ಲೈನಿನಲ್ಲಿ ಉಂಟಾಗುವ ದೋಷಗಳಿಂದ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತದೆ.

(ಆ) ಸಾಮಾನ್ಯವಾಗಿ ಅಂಕೋಲಾಕ್ಕೆ ಕುಮಟಾದಲ್ಲಿರುವ 110 ಕೆ.ವಿ.ಸ್ಟೇಷನ್ನಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಕುಮಟಾ-ಅಂಕೋಲಾ ನಡುವಿನ ವಿದ್ಯುತ್ ಲೈನು ದೋಷಪೂರಿತಗೊಂಡಾಗ ಮಾತ್ರ, ಪರ್ಯಾಯ ವ್ಯವಸ್ಥೆಯಾಗಿ ಕಾರವಾರದಿಂದ ಅಂಕೋಲಾಕ್ಕೆ ವಿದ್ಯುತ್ ಸರಬರಾಜನ್ನು ಮಾಡಲಾಗುವುದು.

ವಿಷಯ:- ಸಣ್ಣ ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಗೆ ವಿಲೀನಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 107(205)

ಶ್ರೀ ಬಿ.ಎಸ್.ಯಡಿಯೂರಪ್ಪ(ಶಿಕಾರಿಪುರ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಸಣ್ಣ ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಯೊಡನೆ ಈ ಹಿಂದೆ ಏತಕ್ಕೆ ವಿಲೀನಗೊಳಿಸಲಾಗಿತ್ತು; ಪುನಃ ಏತಕ್ಕಾಗಿ ವಿಭಜನೆಗೊಳಿಸಲಾಯಿತು?

ಆ) ದಿನಾಂಕ: 29ನೇ ಮೇ 1996ರಂದು ಲೋಕೋಪಯೋಗಿ ಇಲಾಖೆಯಿಂದ ಸಣ್ಣ ನೀರಾವರಿ ಇಲಾಖೆಯನ್ನು ಬೇರ್ಪಡಿಸಿದ್ದು, ಈವರೆಗೆ ಬೇರ್ಪಡಿಸಿರುವ ಉಪ ವಿಭಾಗಗಳು ಕಾರ್ಯಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಶಿಕಾರಿಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು ಹೆಚ್ಚು ಇದ್ದು ಈ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಉಪ ವಿಭಾಗವನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಯಾವ ಹಂತದಲ್ಲಿದೆ?